# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಬೆಂಗಳೂರು ಕೇಂದ್ರೀಯ ವಿಭಾಗ : ಬೆಂಗಳೂರು

ಕ್ರಸಂ: ಕರಾಸಾ/ಬೆಂ.ಕೇ.ವಿ/ಸಂ/ವಾಣಿಜ್ಯ/ 2225 /16-17 ದಿ: 05-01-2017

## "ಸಂಧಾನ ಪ್ರಕಟಣೆ ಸಂಖ್ಯೆ : 01/2017"

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗದ ವ್ಯಾಪ್ತಿಯಲ್ಲಿರುವ ನೆಲಮಂಗಲ ವಾಹನ ನಿಲ್ದಾಣದ ವಾಣಿಜ್ಯ ಸಂಕೀರ್ಣದಲ್ಲಿ ದಿನಾಂಕ: 28-02-2017 ಕ್ಕೆ ಖಾಲಿಯಾಗುವ ಮಳಿಗೆ ಸಂಖ್ಯೆ: 10 ರಲ್ಲಿ ಜನರಲ್ ಸ್ಟೋರ್ ವ್ಯಾಪಾರ ಮಾಡಲು 05 ವರ್ಷಗಳ ಅವಧಿಗೆ ಪರವಾನಿಗೆದಾರರನ್ನು ಆಯ್ಕೆ ಮಾಡಲು ಸಂಧಾನವನ್ನು ದಿನಾಂಕ: 19-01-2017 ರಂದು 14:00 ಗಂಟೆಗೆ ವಿಭಾಗೀಯ ನಿಯಂತ್ರಣಾಧಿಕಾರಿ ರವರ ಕಛೇರಿ, ಕ.ರಾ.ರ.ಸಾ.ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗ, ಶಾಂತಿನಗರ, ಬೆಂಗಳೂರು-560027 ರಲ್ಲಿ ನಡೆಸಲಾಗುವುದು. ಸದರಿ ಮಳಿಗೆಯ ವಿಸ್ತೀರ್ಣ 118 ಚದರ ಅಡಿಗಳು, ನಿಗದಿಪಡಿಸಿರುವ ಮಾಸಿಕ ಪರವಾನಿಗೆ ಶುಲ್ಕ ರೂ.33,094-00 ಹಾಗೂ ಇ.ಎಂ.ಡಿ ಮೊತ್ತ ರೂ.99,282-00ಗಳಾಗಿರುತ್ತದೆ. ಭಾಗವಹಿಸಲು ಇಚ್ಛೆಯುಳ್ಳವರು ವಿಳಾಸದ ದೃಢೀಕರಣಕ್ಕೆ ಆಧಾರ್ ಕಾರ್ಡ್/ ಮತದಾರರ ಗುರುತಿನ ಚೀಟಿಯ ಪ್ರತಿಯನ್ನು ಮತ್ತು ಅರ್ಜಿಯ ಶುಲ್ಕ ರೂ.350-00 ಗಳನ್ನು ಡಿಡಿ/ನಗದು ಮೂಲಕ ಪಾವತಿಸಿ, ಅರ್ಜಿಯನ್ನು ಹಾಗೂ ಷರತ್ತು ಮತ್ತು ನಿಬಂಧನೆಗಳನ್ನು ಕಛೇರಿಯ ವೇಳೆಯಲ್ಲಿ ದಿನಾಂಕ: 19-01-2017 ರಂದು 12.00 ಗಂಟೆಯವರೆಗೆ ಪಡೆಯಬಹುದು. ಇ.ಎಂ.ಡಿ ಮೊತ್ತ ಪಾವತಿಸಿರುವ ರಸೀದಿ ಅಥವಾ ಡಿಡಿ ಮತ್ತು ಸಂಬಂಧಪಟ್ಟ ದಾಖಲಾತಿಗಳನ್ನು ಅಡಕಗೊಳಿಸದೇ ಇದ್ದ ಪಕ್ಷದಲ್ಲಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಸಂಧಾನದಲ್ಲಿ ಭಾಗವಹಿಸಿರುವವರ ಪೈಕಿ ಯಶಸ್ವಿಯಾದವರು ಸೂಚಿಸಿರುವ ಪರವಾನಿಗೆ ಶುಲ್ಕದ 3ರಷ್ಟು ಮೊತ್ತವನ್ನು ಭದ್ರತಾ ಠೇವಣಿಯಾಗಿ ಸದರಿ ದಿನವೇ ಪಾವತಿಸಬೇಕಾಗಿರುತ್ತದೆ. ಸಂಸ್ಥೆಯು ಆಗಿಂದಾಗ್ಗೆ ವಿಧಿಸುವ ಷರತ್ತು ಮತ್ತು ನಿಂಬಂಧನೆಗಳಿಗೆ ಬದ್ಧರಾಗಿರಬೇಕು, ಯಾವುದೇ ಕಾರಣ ನೀಡದೆ ಸಂಧಾನವನ್ನು ಪುರಸ್ಕರಿಸುವ/ರದ್ದುಪಡಿಸುವ ಅಥವಾ ಮಾರ್ಪಾಡು ಮಾಡುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ: 7760990029 & 7760990261 ಗಳನ್ನು ಸಂಪರ್ಕಿಸಲು ಕೋರಲಾಗಿದೆ.

ವಿಭಾಗೀಯ ನಿಯಂತ್ರಣಾಧಿಕಾರಿ.
ಕ.ರಾ.ರ.ಸಾ. ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗ.
ಶಾಂತಿನಗರ, ಬೆಂಗಳೂರು-560027.